**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವ ನ್ಯಾಯಾಲಯ, ಗುಂಡ್ಲುಪೇಟೆ**

**ಸಿಸಿ ನಂ . 752/ 2018**

ಫಿರ್ಯಾದುದಾರರು : ಬೇಗೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ಅಬೂಬಕ್ಕರ್ ಎನ್ . ಬಿ ಬಿನ್ ಭಾವಕುಂಜು, 41 ವರ್ಷ
ವಾಸಃ ನೀರಿಯಲಿ ಹೌಸ್, 4 ನೇ ಮೇಲ್, ಎರುಮಲ ಪೋಸ್ಟ್
ಆಲುವಾ ವಳಕುಲಮ್ ಎರ್ನಾಕುಲಂ ಕೇರಳ ರಾಜ್ಯ .

**ದೋಷಾರೋಪಣೆ**

ಶ್ರೀ ನಾಗರಾಜ ಬಾರ್ಕಿ ಬಿ.ಎ.ಎಲ್.ಎಲ್.ಬಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂ, ಗುಂಡ್ಲುಪೇಟೆ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿ. 11.04.2018 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಪೊಲೀಸ್ ಠಾಣಾ ಸರಹದ್ದಿನ ಹಳ್ಳದ ಮಾದಹಳ್ಳಿ ಕ್ರಾಸ್ ಹತ್ತಿರ ಗುಂಡ್ಲುಪೇಟೆ- ಬೇಗೂರು ಮುಖ್ಯ ರಸ್ತೆಯಲ್ಲಿ (ಎನ್ ಹೆಚ್ 766) ಮೃತ ಶಿವಾನಂದ ರವರು ಕೆ.ಎ 45 ಜೆ.4522 ರ ಮೋಟಾರ್ ಬೈಕ್ ನಲ್ಲಿ ಹಿಂಬದಿಯಲ್ಲಿ ಸಾಕ್ಷಿ 2 ರವರನ್ನೂ ಕೂರಿಸಿಕೊಂಡು ಹಳ್ಳದ ಮಾದಹಳ್ಳಿ ಕ್ರಾಸ್ ಕಡೆಯಿಂದ ಬೇಗೂರಿಗೆ ಬರಲು ರಸ್ತೆಯ ಎರಡೂ ಕಡೆ ನೋಡಿ ಬೇಗೂರು ಕಡೆಗೆ ತಿರುಗಿಸುತ್ತಿದ್ದಾಗ ಬೇಗೂರು ಕಡೆಯಿಂದ ಆರೋಪಿಯಾದ ನೀವು ಕೆ.ಎಲ್ .05 ಜೆಡ್ .6051 ಕಾರನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಶಿವಾನಂದ ಮತ್ತು ಸಾಕ್ಷಿ 2 ರವರು ಬರುತ್ತಿದ್ದ ಮೋಟಾರ್ ಬೈಕ್ ಗೆ ಡಿಕ್ಕಿ ಮಾಡಿದ್ದು ಆ ಮೂಲಕ ಭಾ ದಂ ಸಂ ಕಲಂ 279 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

2 ನೇಯದಾಗಿ ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಯಾದ ನೀವು ಮೃತ ಶಿವಾನಂದ ಮತ್ತು ಹಿಂಬದಿಯಲ್ಲಿ ಸಾಕ್ಷಿ 2 ರವರು ಕುಳಿತು ಬರುತ್ತಿದ್ದ ಮೋಟಾರ್ ಬೈಕ್ ಗೆ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಮೃತ ಶಿವಾನಂದ ರವರ ಬೈಕ್ ಡಿಕ್ಕಿ ಮಾಡಿದ ಪರಿಣಾಮ ಶಿವಾನಂದ ರವರಿಗೆ ತಲೆಗೆ ಹಾಗೂ ಮತ್ತಿತರ ಕಡೆಗೆ ರಕ್ತಗಾಯವಾಗಿದ್ದು ಹಾಗೂ ಹಿಂಬದಿಯಲ್ಲಿ ಕುಳಿತ್ತಿದ್ದ ಸಾಕ್ಷಿ 2 ರವರಿಗೆ ಬಲಕಾಲಿನ ಹಿಮ್ಮಡಿ ಹಾಗೂ ಎಡಕಾಲಿನ ಮಂಡಿಯ ಬಳಿ ತೀವ್ರ ಸ್ವರೂಪದ ಗಾಯಗಳಾಗಿದ್ದು ಆ ಮೂಲಕ ಭಾ ದಂ ಸಂ ಕಲಂ 338 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

3 ನೇಯದಾಗಿ ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಯಾದ ನೀವು ಮೃತ ಶಿವಾನಂದ ಮತ್ತು ಹಿಂಬದಿಯಲ್ಲಿ ಸಾಕ್ಷಿ 2 ರವರು ಕುಳಿತು ಬರುತ್ತಿದ್ದ ಮೋಟಾರ್ ಬೈಕ್ ಗೆ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಮೃತ ಶಿವಾನಂದ ರವರ ಬೈಕ್ ಡಿಕ್ಕಿ ಮಾಡಿದ ಪರಿಣಾಮ ಮೃತ ಶಿವಾನಂದ ರವರಿಗೆ ತಲೆಗೆ ಹಾಗೂ ಮತ್ತಿತರ ಕಡೆಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಸೇರಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ಅದೇ ದಿನ ದಿನಾಂಕ 14.04.2018 ರಂದು ಮಧ್ಯಾಹ್ನ 2.40 ಗಂಟೆ ಸಮಯದಲ್ಲಿ ಮೃತ ಪಟ್ಟಿದ್ದು ಆ ಮೂಲಕ ಭಾ ದಂ ಸಂ ಕಲಂ 304 (ಎ) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಯನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ, ಈ ನ್ಯಾಯಾಲಯ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾ ದಂ.
ಗುಂಡ್ಲುಪೇಟೆ

# <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವ ನ್ಯಾಯಾಲಯ, ಗುಂಡ್ಲುಪೇಟೆ</u>

**<u>ಸಿಸಿ ನಂ . 752/ 2018</u>**

ಫಿರ್ಯಾದುದಾರರು : ಬೇಗೂರು ಪೊಲೀಸ್ ಠಾಣೆ

ವಿರುದ್ದ

ಆರೋಪಿತರು : ಅಬೂಬಕ್ಕರ್ ಎನ್ . ಬಿ ಬಿನ್ ಭಾವಕುಂಜು, 41 ವರ್ಷ
ವಾಸಃ ನೀರಿಯಲಿ ಹೌಸ್, 4 ನೇ ಮೇಲ್, ಎರುಮಲ ಪೋಸ್ಟ್
ಆಲುವಾ ವಳಕುಲಮ್ ಎರ್ನಾಕುಲಂ ಕೇರಳ ರಾಜ್ಯ .

## <u>ದೋಷಾರೋಪಣೆ</u>

**ಪ್ರಶ್ನೆ**–1 ಮೇಲೆ ಹೇಳಿದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ:

**ಪ್ರಶ್ನೆ** –2 ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಯನ್ನು ಆಪಾದಿತರಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

ದಿ.

(ನಾಗರಾಜ ಬಾರ್ಕಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾ ದಂ.
ಗುಂಡ್ಲುಪೇಟೆ